# 12 ತಿಂಗಳ ವಸತಿ ರಹಿತ ಬ್ರಿಡ್ಜ್ ಕೋರ್ಸ್ (ಎನ್.ಆರ್.ಬಿ.ಸಿ)

## 1. ಪೂರಕ ಶಾಲೆ :

ಪೂರಕ ಶಾಲೆಯ ಪರಿಕಲ್ಪನೆಯು 05-06ನೇ ಸಾಲಿನಲ್ಲಿ ಹಾಗೂ ಆ ಹಿಂದೆ ನಡೆಸಿದ ಶಿಕ್ಷಣ ಖಾತ್ರಿ ಯೋಜನೆ ಕೇಂದ್ರದ ಪರಿಕಲ್ಪನೆಗೆ ಸಂವಾದಿಯಾಗಿದೆ. ಶಾಲಾ ವಯಸ್ಸಿನ ಎಲ್ಲಾ ಮಕ್ಕಳಿಗೆ ಸಾರ್ವತ್ರಿಕ ಅವಕಾಶವನ್ನು ಕಲ್ಪಿಸುವ ಜವಾಬ್ದಾರಿಯನ್ನು ಸರ್ಕಾರಗಳಿಗೆ ಸಂವಿಧಾನ ವಿಧಿಸುತ್ತದೆ. ಸರ್ಕಾರಗಳು ಅನೂಚಾನವಾಗಿ ಶಾಲೆ ತೆರೆಯುವ ಕೆಲಸವನ್ನು ನಿರ್ವಹಿಸುತ್ತಾ ಬಂದಿವೆ. ಆದಾಗ್ಯೂ ಶಾಲಾ ರಹಿತ ಜನವಸತಿ ಪ್ರದೇಶಗಳು ಉಳಿದಿರುವುದು ದಿಟ. ಈ ಹಿನ್ನೆಲೆಯಲ್ಲಿ ಅಂತಹ ಜನವಸತಿ ಪ್ರದೇಶಗಳ ಮಕ್ಕಳಿಗೆ ಶಿಕ್ಷಣವನ್ನು ಕಲ್ಪಿಸುವ ಹಿನ್ನೆಲೆಯಲ್ಲಿ ರೂಪುಗೊಂಡ ಪರ್ಯಾಯ ಕಾರ್ಯತಂತ್ರವೇ ಪೂರಕ ಶಾಲೆ ವಾಸ್ತವಿಕವಾಗಿ ಪೂರಕಶಾಲೆಗಳನ್ನು ಕೇಂದ್ರ ಸರ್ಕಾರ ಸೂಚಿಸಿರುವ ಶಿಕ್ಷಣ ಖಾತ್ರಿ ಯೋಜನೆ. ಕೇಂದ್ರಗಳ (ಇ.ಜಿ.ಎಸ್.) ಪರಿಕಲ್ಪನೆಯ ಮುಂದುವರಿಕೆಯಾಗಿ ಕರ್ನಾಟಕದಲ್ಲಿ 2006-07 ರಿಂದ ಪ್ರಾರಂಭಿಸಲಾಗಿದೆ. 2007-08 ಮತ್ತು 2008-09ರಲ್ಲಿ ಮುಂದುವರಿಸಿದೆ. ಇ.ಜಿ.ಎಸ್. ಕೇಂದ್ರಗಳ ಸ್ಥಾಪನೆಗೆ ಕೇಂದ್ರ ಸರ್ಕಾರ ಸೂಚಿಸುವ ಚೌಕಟ್ಟಿನಂತೆ ಶಾಲಾ ರಹಿತ ಜನವಸತಿ ಪ್ರದೇಶಗಳಲ್ಲಿ ಕನಿಷ್ಠ 15 ಶಾಲಾ ವಯಸ್ಸಿನ ಮಕ್ಕಳು ಇರಬೇಕಾಗುತ್ತದೆ.

ಆದರೆ ನಮ್ಮ ರಾಜ್ಯದಲ್ಲಿ ಶಾಲೆ ತೆರೆಯಲು ಇರುವ ಮಾನದಂಡಗಳು ಇ.ಜಿ.ಎಸ್. ಕೇಂದ್ರದ ಸ್ಥಾಪನೆಯ ಮಾನದಂಡಗಳಿಗಿಂತ ಹೆಚ್ಚು ಸ್ಪಂದನ ಶೀಲವಾಗಿರುವುದರಿಂದ ಕೇಂದ್ರ ಸರ್ಕಾರ ಇ.ಜಿ.ಎಸ್. ಕೇಂದ್ರಗಳನ್ನು 06-07 ನೇ ಸಾಲಿನಲ್ಲಿ ಮುಂಜೂರು ಮಾಡಲಿಲ್ಲ. ಆದರೆ ನಮ್ಮಲ್ಲಿನ ಭೌಗೋಳಿಕ ಮತ್ತು ಸಮುದಾಯದ ಸಹಮತಿಯ ಮೇರೆಗೆ ಇ.ಜಿ.ಎಸ್. ಕೇಂದ್ರಗಳಿಗೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸುವುದು ಅನಿವಾರ್ಯವಾದ ಕಾರಣ ಪೂರಕ ಶಾಲೆಯ ಕಾರ್ಯತಂತ್ರವನ್ನು ಅಳವಡಿಸಬೇಕಾದ ಔಚಿತ್ಯ ತಲೆದೋರಿತು. ಹಾಗಾಗಿ ಪೂರಕ ಶಾಲೆಗಳನ್ನು 06-07 ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು. ವಾಸ್ತವಿಕವಾಗಿ ಇ.ಜಿ.ಎಸ್. ಮತ್ತು ಪೂರಕ ಶಾಲೆಯ ಪರಿಕಲ್ಪನೆಗಳು ಸ್ಥೂಲವಾಗಿ ಒಂದೇ ಆಗಿವೆ. ಪೂರಕಶಾಲೆಯನ್ನು ಹತ್ತಿರದ ಶಾಲೆಗೆ 1 ಕಿ.ಮೀ ಗಿಂತ ಹೆಚ್ಚಿಗೆ ದೂರ ಇರುವ ಶಾಲಾರಹಿತ ಜನವಸತಿ ಕೇಂದ್ರಗಳಲ್ಲಿ 5 ಮಕ್ಕಳಿಗಿಂತ ಕಡಿಮೆ ಇರುವ ಪ್ರಸಂಗಗಳಲ್ಲಿಯೂ ತೆಗೆಯಬಹುದು. ಆದರೆ ಸ್ವಯಂ ಸೇವಕ ಪಡೆಯುವ ಸಂಭಾವನೆ ಮಾತ್ರ ಕಡಿಮೆ ಆಗುತ್ತದೆ.

ಪ್ರತಿ ಮಗುವಿಗೆ ಸ್ವಯಂ ಸೇವಕ ಪಡೆಯುವ ಸಂಭಾವನೆ 10 ತಿಂಗಳಿಗೆ 2000/- ರೂಪಾಯಿಗಳು. ಈ ಹಣವು ವಾರ್ಷಿಕವಾಗಿ 20,000/- ರೂಪಾಯಿಗಳನ್ನು ಮೀರತಕ್ಕದ್ದಲ್ಲ. ಜನವಸತಿ ಸಮುದಾಯವು ಪೂರಕ ಶಾಲೆಯನ್ನು ಪಡೆಯಲು ಅರ್ಹತೆಯನ್ನು ಹೊಂದಿದ್ದರೂ ಅವರು ಶಾಲೆಯಿಂದ ಹೊರಗುಳಿದ ತಮ್ಮ ಮಕ್ಕಳನ್ನು ಹತ್ತಿರದ ಶಾಲೆಗೆ ಕಳುಹಿಸಲು ಒಪ್ಪಿದರೆ, ಆ ಮಕ್ಕಳಿಗೂ ಸೌಲಭ್ಯವನ್ನು ನೀಡಬಹುದು. ಪೂರಕ ಶಾಲೆ ಮತ್ತು ಸಾರಿಗೆ ಸೌಲಭ್ಯದ ಕಾರ್ಯತಂತ್ರಗಳಲ್ಲಿ ಒಂದನ್ನು ಅರ್ಹ ಶಾಲಾ ಹೊರಗಿನ ಮಕ್ಕಳ ಪೋಷಕರು ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ.

### ಉದ್ದೇಶಗಳು :

- ಶಾಲೆ ದೂರ ಇರುವ ಕಾರಣದಿಂದ ಶಾಲಾ ವಯಸ್ಸಿನ ಮಕ್ಕಳು ಶಾಲೆಯಿಂದ ಹೊರಗೆ ಇದ್ದಲ್ಲಿ ಮಕ್ಕಳ ಶಿಕ್ಷಣಕ್ಕೆ ಅನುಕೂಲ ಕಲ್ಪಿಸುವುದು.
- ಇಂತಹ ಮಕ್ಕಳನ್ನು ಕ್ರಮೇಣ ಔಪಚಾರಿಕ ಶಾಲಾ ಪರಿಧಿಗೆ ತರುವುದು.
- ಶಿಕ್ಷಣ ವಂಚಿತ / ಸಂಕಷ್ಟದಲ್ಲಿರುವ ಶಾಲಾ ವಯಸ್ಸಿನ ಮಕ್ಕಳಿಗೆ ನೆರವಾಗುವುದು.

### ವ್ಯಾಪ್ತಿ :

- 6-14 ವಯೋಮಾನದ ಶಾಲೆಯಿಂದ ಹೊರಗುಳಿದ ಮಕ್ಕಳು ಈ ವ್ಯಾಪ್ತಿಗೆ ಒಳಪಡುತ್ತಾರೆ.
- ಜನವಸತಿ ಪ್ರದೇಶದಿಂದ 1 ಕಿ.ಮೀ. ವ್ಯಾಪ್ತಿಯಲ್ಲಿ ಪ್ರಾಥಮಿಕ ಶಾಲೆ, 3 ಕಿ.ಮೀ. ವ್ಯಾಪ್ತಿಯಲ್ಲಿ ಹಿರಿಯ ಪ್ರಾಥಮಿಕ ಶಾಲಾ ಸೌಲಭ್ಯವಿಲ್ಲದೆ, ಇದ್ದು (ಭೌಗೋಳಿಕ / ಇತರೆ ಸಂಗತಿಗಳು ಮಗು ಶಾಲೆಗೆ ಹೋಗುವುದಕ್ಕೆ ತೊಂದರೆ ಉಂಟು ಮಾಡುವ ಸಂದರ್ಭದಲ್ಲಿ ಸೂಚಿಸಿರುವ ದೂರಕ್ಕೆ ವಿನಾಯಿತಿ ಇದೆ) ಅಂತಹ ಜನವಸತಿಯ ಶಾಲೆಯಿಂದ ಹೊರಗೆ ಉಳಿದ ಮಕ್ಕಳು ಈ ಕಾರ್ಯತಂತ್ರಕ್ಕೆ ಒಳಪಡುತ್ತಾರೆ. ಶಾಖಾ ಶಾಲೆಯಂತೆ ಕಾರ್ಯ ನಿರ್ವಹಿಸುತ್ತಾರೆ.

- ಪೂರಕ ಶಾಲೆಯನ್ನು ತೆರೆಯಲು ಮಕ್ಕಳ ಸಂಖ್ಯೆಗೆ ಕನಿಷ್ಟ ಮಿತಿ ಇಲ್ಲ.
  ಪೂರಕ ಶಾಲೆಗೆ ಸೇರಿದ ಮಕ್ಕಳನ್ನು ಹತ್ತಿರದ ಪ್ರಾಥಮಿಕ ಶಾಲೆಗೆ ದಾಖಲು ಮಾಡಿ – ಬೋಧನೆಯನ್ನು ಮಾತ್ರ ಪೂರಕ ಶಾಲೆಯಲ್ಲಿ ನಡೆಸುವುದು, ಹಾಜರಾತಿ ಕಲಿಕೆಯ ಪ್ರಗತಿಯನ್ನು ಹತ್ತಿರದ ಶಾಲೆಗೆ ನೀಡಿ ಫಲಿತಾಂಶ ಘೋಷಣೆ ಮಾಡಿಸುವುದು ಅಂದರೆ ಈ ಮಕ್ಕಳು ಹತ್ತಿರದ ಶಾಲೆಯ ಮಕ್ಕಳೇ ಆಗುತ್ತಾರೆ.
- ಶಾಲೆಯಿಂದ ಹೊರಗೆ ಉಳಿದ ಮಕ್ಕಳಿಗೆ (ಮೇಲೆ ತಿಳಿಸಿರುವ ನಿಬಂಧನೆಗಳಂತೆ) ಈ ಕಾರ್ಯತಂತ್ರವನ್ನು ಬಳಸಿದರೂ ಈ ಕೇಂದ್ರವು ಪ್ರಾರಂಭವಾದ ತರುವಾಯ – ಶಾಲೆಗೆ ಹೋಗುತ್ತಿದ್ದ ಮಕ್ಕಳು ಈ ಕೇಂದ್ರಗಳಿಗೆ ಬರಲು ಇಚ್ಛೆಪಟ್ಟಲ್ಲಿ ಅವರಿಗೆ ಪ್ರವೇಶಕ್ಕೆ ಅವಕಾಶವಿದೆ. ಆದರೆ ಟಿ.ಸಿ. ಮೇರೆಗೆ ಪೂರಕ ಶಾಲೆಗೆ ಪ್ರವೇಶ ನೀಡುವ ಪ್ರಕ್ರಿಯೆಗೆ ಅವಕಾಶ ಇಲ್ಲ. ಸ್ವಯಂ ಸೇವಕನ / ಳ ಗೌರವಧನವನ್ನು ಶಾಲೆಯಿಂದ ಹೊರಗೆ ಉಳಿದ ಮಕ್ಕಳು ಪೂರಕ ಶಾಲೆಗೆ ಬಂದ ಸಂಖ್ಯೆಯನ್ನು ಆಧರಿಸಿ ಮಾತ್ರವೇ ನೀಡತಕ್ಕದ್ದು.
- ಜೂನ್ 1 ರಿಂದ ಮಾರ್ಚಿ 31ನೇ ತಾರೀಖಿನವರೆಗೆ ಈ ಕೇಂದ್ರ ನಿರಂತರವಾಗಿ ನಡೆಯುತ್ತದೆ. ದಸರೆ, ಕ್ರಿಸ್‌ಮಸ್ ರಜೆಯನ್ನು ಈ ಕೇಂದ್ರಗಳಿಗೆ ನೀಡಬಾರದು (ದೀರ್ಘ ರಜೆ)

**ಈ ಕಾರ್ಯತಂತ್ರ ಎಲ್ಲಿ / ಯಾರಿಗಾಗಿ :**

- ಶಾಲಾ ರಹಿತ ಜನವಸತಿ ಪ್ರದೇಶದಲ್ಲಿ (ನಿಬಂಧನೆ ಮೇಲೆ ವಿವರಿಸಿದಂತೆ) ಅಥವಾ ಅಂತಹ ಜನವಸತಿ / ಸಮುಚ್ಛಯಗಳಿಗೆ ಅನುಕೂಲವಾಗುವ ಕೇಂದ್ರ ಪ್ರದೇಶದಲ್ಲಿ ಸ್ಥಾಪಿಸಬಹುದು.
- ಕೇಂದ್ರ ನಡೆಸಲು ಯೋಗ್ಯವಾದ ಕಟ್ಟಡ ಅಥವಾ ಯುಕ್ತ ಸ್ಥಳವನ್ನು ಸಮುದಾಯವು ಒದಗಿಸಬೇಕು. ಈ ರೀತಿ ಪಡೆಯಲು ಅವಕಾಶ ಇರದ ಪ್ರಸಂಗದಲ್ಲಿ ಜಿಲ್ಲಾ ಶಿಕ್ಷಣ ಆಡಳಿತ ವೈಯಕ್ತಿಕ ಗಮನಹರಿಸಿ ಸಮಸ್ಯೆ ಬಗೆಹರಿಸುವುದು.
- ಪೂರಕ ಶಾಲೆ ಶಾಲೆಯಿಂದ ಹೊರಗೆ ಇರುವ ಮಕ್ಕಳಿಗಾಗಿ ಸ್ಥಾಪಿಸಿದರೂ ಶಾಲೆಗೆ ಹೋಗುವ ಮಕ್ಕಳು ಶಿಕ್ಷಣ ಪಡೆಯಬಹುದು. (ಮೇಲೆ ತಿಳಿಸಿದ ನಿಬಂಧನೆಯಂತೆ)

**ಯಾರು ನಡೆಸಬೇಕು :**

- ಶಿಕ್ಷಣ ಇಲಾಖೆ ನಡೆಸುತ್ತದೆ. ಹತ್ತಿರದ ಪ್ರಾಥಮಿಕ ಶಾಲೆ ಮುಖ್ಯಸ್ಥರು ನೇರವಾಗಿ ಜವಾಬ್ದಾರರು.
- ಕಟ್ಟಡ ನೀಡಲು ಅವಕಾಶವಿಲ್ಲ. ಸಮುದಾಯ ನೆರವಿನಿಂದ ಸ್ಥಳಾವಕಾಶ ಪಡೆಯುವುದು.

**ಹಣಕಾಸು ಖರ್ಚಿನ ವಿವರ :**

- ಶಾಲೆ ಪ್ರಾರಂಭಿಸುವ ಕೇಂದ್ರಕ್ಕೆ ನಿಗಧಿಪಡಿಸುವ ಮಕ್ಕಳ ಸಂಖ್ಯೆಯನ್ನು ಬಿ.ಆರ್.ಸಿ.ಯವರು ತಾಲ್ಲೂಕು ಹಂತದಲ್ಲಿ ಕ್ರೋಢೀಕರಿಸಿ, ಅವಶ್ಯಕವಾದ ಹಣಕ್ಕಾಗಿ ಜಿಲ್ಲಾ ಎಸ್.ಎಸ್.ಎ. ಕಛೇರಿಗೆ ಏಪ್ರಿಲ್ 20ರೊಳಗೆ ಬೇಡಿಕೆ ಸಲ್ಲಿಸಬೇಕಿದೆ.
- ಜಿಲ್ಲಾ ಕಛೇರಿಯವರು ಇಡೀ ಜಿಲ್ಲೆಯ ಮಕ್ಕಳ ಸಂಖ್ಯೆಯನ್ನು ರಾಜ್ಯ ಕಛೇರಿಗೆ ನೀಡಿ, ಅಲ್ಲಿಂದ ಜಿಲ್ಲೆಗೆ ವಸತಿ ರಹಿತ ಕೇಂದ್ರಕ್ಕೆ ಮಕ್ಕಳ ಸಂಖ್ಯೆಗೆ ಅನುಗುಣವಾದ ಮೊತ್ತವನ್ನು ಏಪ್ರಿಲ್ ಅಂತ್ಯದೊಳಗೆ ತಾಲ್ಲೂಕು ಹಂತಕ್ಕೆ ಬಿಡುಗಡೆ ಮಾಡಿಸಿಕೊಳ್ಳಬೇಕು. ಒಂದು ವೇಳೆ ರಾಜ್ಯದಿಂದ ಹಣ ಬಿಡುಗಡೆ ವಿಳಂಬವಾದರೆ, ಜಿಲ್ಲಾ ಹಂತದ ಆಡಳಿತಾತ್ಮಕ ವೆಚ್ಚದಲ್ಲಿ ಮುಂಗಡ ಮಾಡಿಕೊಂಡು ತತ್ಕಾಲದ ಖರ್ಚಿಗೆ ಮರುಭರ್ತಿ ಆಧಾರದ ಮೇಲೆ ಹಣ ಬಿಡುಗಡೆ ಮಾಡಬೇಕು.
- ಹಣವನ್ನು ತಾಲ್ಲೂಕು ಹಂತದಿಂದ, ಇಲಾಖೆ ನಡೆಸುವುದಾದಲ್ಲಿ ಶಾಲಾ ಎಸ್.ಡಿ. ಎಂ.ಸಿ.ಗೆ ಬಿಡುಗಡೆ ಮಾಡಬೇಕು.
- ಇಲಾಖೇತರ ಸಂಸ್ಥೆಗಳು ನಡೆಸುವುದಾದಲ್ಲಿ ನಿಗಧಿಪಡಿಸಿರುವ ಒಟ್ಟು ಹಣದಲ್ಲಿ 40:40:20ರ ಪ್ರಮಾಣದಲ್ಲಿ ಮೂರು ಹಂತದಲ್ಲಿ ಬಿಡುಗಡೆ ಮಾಡಬೇಕು. ಹಣವನ್ನು ಕ್ರಾಸ್ಡ್ ಚೆಕ್ ಮೂಲಕ ಸಂಸ್ಥೆಯ ಹೆಸರಿಗೆ ನೀಡಬೇಕು ಮತ್ತು ಬಳಕೆಯಾದ ಮೊತ್ತಕ್ಕೆ ಉಪಯೋಗತಾ ಪತ್ರ ಪಡೆಯಬೇಕಿದೆ.

ಇಲಾಖೇತರ ಸಂಸ್ಥೆಗಳು ನಡೆಸುವಾಗ MOU ಮಾಡಿಕೊಳ್ಳಬೇಕು. ಸದರಿ MOU ನಲ್ಲಿ ಹಣ ಬಿಡುಗಡೆಗೆ ಸೂಚಕಗಳನ್ನು (Indicators) ನಿಗಧಿಪಡಿಸಬೇಕು. ಸಾಂಕೇತಿಕವಾಗಿ ಈ ಅಂಶಗಳನ್ನು ಮುಂದೆ ನೀಡಿದೆ. ಹೆಚ್ಚಿನ ಮಾಹಿತಿಗೆ ಸರ್ಕಾರೇತರ ಸಂಘಟನೆಗಳ ಭಾಗವಹಿಸುವಿಕೆ ಅಧ್ಯಾಯ ನೋಡಿ.

- ಪೂರಕ ಶಾಲೆಯು ಭಾನುವಾರ ಮತ್ತು ರಾಜ್ಯ ನಿಗಧಿಗೊಳಿಸಿರುವ ರಜೆ ದಿನಗಳಂದು ಹೊರತುಪಡಿಸಿ ಉಳಿದ ದಿನಗಳಂದು ಅವ್ಯಾಹತವಾಗಿ ನಡೆಯುತ್ತದೆ.
- ಪೂರಕ ಶಾಲೆಯು ಸರ್ಕಾರಿ ಶಾಲೆಗಳು ಅನುಸರಿಸುವ ವೇಳಾಪಟ್ಟಿ – ಪಠ್ಯಕ್ರಮವನ್ನು ಅನುಸರಿಸುವುದು.
- ಸ್ವಯಂ ಸೇವಕರ ವಿದ್ಯಾರ್ಥಿಗಳ ಹಾಜರಾತಿ ಗುರುತಿಸಲು, ಮಕ್ಕಳ ಕಲಿಕಾ ಪ್ರಗತಿಯನ್ನು ಪರಿಶೀಲಿಸಲು ಪ್ರೋತ್ಸಾಹಕಗಳ ವಿತರಣೆಯನ್ನು ಪರಿಶೀಲಿಸಲು ಅನುಕೂಲವಾಗುವ ಹಾಗೂ ಇಲಾಖೆ ಸೂಚಿಸುವ ದಾಖಲೆಗಳನ್ನು ಇಡುವುದು.
- ಇಲಾಖೆ ಕಾಲಕಾಲಕ್ಕೆ ಬಯಸುವ ಪೂರಕ ಶಾಲೆಯ ಮಾಹಿತಿಗಳನ್ನು ನೀಡುವುದು
- ಪೂರಕ ಶಾಲೆಯ ಎಲ್ಲಾ ಮಕ್ಕಳು ಶೇಕಡ 60 ರಷ್ಟು ಕಲಿಕೆಯನ್ನು ಸಾಧಿಸುವಂತೆ ಕ್ರಮ ಮಾಡುವುದು
- ಇತ್ಯಾದಿ ಸಂಗತಿಗಳು MOU ನಲ್ಲಿ ಪ್ರತಿಫಲಿತವಾಗಬೇಕು.

**ಹಣಕಾಸಿನ ಖರ್ಚಿನ ಕುರಿತು ಮಿತಿಗಳು :**

| ವಿವರ | 05–06 | 06–07 | 07–08 | 09–10 25 ಮಕ್ಕಳಿಗೆ |
|---|---|---|---|---|
| ಮಕ್ಕಳ ಸಂಖ್ಯೆ | 5+ | ಮಿತಿ ಇಲ್ಲ | | ಮಿತಿ ಇಲ್ಲ |
| ಘಟಕ ವೆಚ್ಚ (ಪ್ರತಿ ಮಗುವಿಗೆ) | 845 ರೂ. | 2500 | | 3000(250□12) |
| ಊಟಕ್ಕೆ | | | | 37,500 (5□25□12□25) |
| ಪ್ರತಿ ಕೇಂದ್ರಕ್ಕೆ | 12625 | ವ್ಯತ್ಯಾಸವಾಗುತ್ತದೆ | | |
| ಸ್ವಸೇ.ಗೌ. ಧನ | 10,000 | ಪ್ರತಿ ಮಗುವಿಗೆ ವಾರ್ಷಿಕ ರೂ. 2000 (ಗರಿಷ್ಠ ರೂ. 10000=00) | | 25,000 (2500□10) |
| ಸಿ.ಜಿ. | 540 | 500 | | 3,750 |
| ಮಕ್ಕಳ ಕಲಿಕಾ ಸಾಮಗ್ರಿ | 500 | 100 / ಮಗುವಿಗೆ | | 3,750 |
| ತರಬೇತಿ | 210 | 1500 (22 ದಿನಗಳಿಗೆ) | | – |
| ಪ್ರಮಾಣ ಪತ್ರ / ಪರೀಕ್ಷೆ | 200 | – | | – |
| ಸೋಮವಾರ ಮತ್ತು ಶುಕ್ರವಾರ ಸಹಿ ನೀಡಲು | – | – | | 5,000 |
| | | | ಒಟ್ಟು | **75,000–00** |

* 06–07ರ ಹಂಚಿಕೆಯನ್ನು ಕೇಂದ್ರದಲ್ಲಿ 5+ ಮಕ್ಕಳು ಇರುವ ಸಂದರ್ಭ ಊಹಿಸಿ ಯೋಜಿಸಿದೆ. ಮಕ್ಕಳ ಸಂಖ್ಯೆ 5 ಕ್ಕಿಂತ ಕಡಿಮೆ ಇದ್ದರೆ ಪ್ರತಿ ಮಗುವಿನ ಘಟಕ ವೆಚ್ಚ 2500/– ಮೀರಬಾರದು.

* ಮಾಹೆಯಾನ 01 ದಿನದಂತೆ 08 ದಿನ ಅಭಿ ಶಿಕ್ಷಣ ಹಂತದಲ್ಲಿ

## ಸ್ವಯಂ ಸೇವಕರ ನೇಮಕ / ತರಬೇತಿ

- ಜೂನ್ ತಿಂಗಳ ಒಳಗೆ ಸ್ವಯಂ ಸೇವಕರ ನೇಮಕ ಆಗಬೇಕು.
- ಸ್ವಯಂ ಸೇವಾಸಂಸ್ಥೆಗಳವರಿಗೆ ಕೇಂದ್ರ ನಡೆಸಲು ಅನುಮತಿ ನೀಡಿದಲ್ಲಿ ಅವರೇ ಸ್ವಯಂ ಸೇವಕರನ್ನು ಬದಲಿಸುತ್ತಾರೆ.
- ಕೇಂದ್ರವನ್ನು ಇಲಾಖೆಯಿಂದ ನಡೆಸಿದರೂ ಸ್ವಯಂ ಸೇವಕರನ್ನು ಸಂಘ–ಸಂಸ್ಥೆಗಳ ಮೂಲಕವೇ ನೇಮಿಸಿಕೊಳ್ಳಬೇಕು.
- ಸ್ವಯಂ ಸೇವಕರು ಶಿಕ್ಷಕರಂತೆ ಕಾರ್ಯ ನಿರ್ವಹಿಸಬೇಕು. ಆದ್ದರಿಂದ ಸ್ವಯಂ ಸೇವಕರಿಗೆ ಟಿ.ಸಿ.ಎಚ್ / ಡಿ.ಎಡ್ ಆಗಿರಬೇಕು. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಮೇಲಧಿಕಾರಿಗಳ ಅನುಮತಿ ಪಡೆದು ಕನಿಷ್ಠ ಎಸ್.ಎಸ್.ಎಲ್.ಸಿ. ಆದವರನ್ನು ನೇಮಿಸಿಕೊಳ್ಳುವುದು.
- ಸ್ವಯಂ ಸೇವಕರಾಗಿ 45 ವರ್ಷ ಮೇಲ್ಪಟ್ಟವರನ್ನು ನೇಮಿಸಿಕೊಳ್ಳಬಾರದು
- ಸ್ಥಳೀಯರಿಗೆ ಮೊದಲ ಆಧ್ಯತೆ
- ಸೇವಾ ಮನೋಭಾವ ಹೊಂದಿದವರಾಗಿರಬೇಕು.
- ಶಿಕ್ಷಕರನ್ನು ಅಗತ್ಯತೆಯ ಮೇಲೆ ನಿಯೋಜಿಸಬಹುದು ಆದರೆ ಅವರಿಗೆ ಯಾವುದೇ ಭತ್ಯೆ ನೀಡುವಂತಿಲ್ಲ.
- ಸ್ವಯಂ ಸೇವಕರಿಗೆ ಕನಿಷ್ಟ 10 ದಿನಗಳ ತರಬೇತಿಯನ್ನು ಇಲಾಖಾವತಿಯಿಂದ ಆಯೋಜಿಸಬೇಕಾಗಿದೆ.
- ಉಳಿದಂತೆ ಸಮಾಲೋಚನ ಸಭೆ / ಇತರ ತರಬೇತಿಗಳಲ್ಲಿ ಅವರನ್ನೂ ಸೇರಿಸಿ. ವಿಷಯ ಸಂಪನ್ಮೂಲ ನೀಡಿ (ಇದು ಮಕ್ಕಳ ಉತ್ತಮ ಕಲಿಕೆಗೆ ಮತ್ತು ಸ್ವಯಂ ಸೇವಕರ ವೈಯಕ್ತಿಕ ಜ್ಞಾನ ಬೆಳವಣಿಗೆಗಾಗಿ) ಇವರ ತರಬೇತಿಯ ಖರ್ಚನ್ನು ಶಿಕ್ಷಕರಿಗೆ ಖರ್ಚು ಮಾಡುವ ದರದಲ್ಲಿ ಖರ್ಚು ಮಾಡಬಹುದು.

## ಕೇಂದ್ರಕ್ಕೆ ಇಲಾಖೆಯಿಂದ ದೊರೆಯುವ ಸೌಲಭ್ಯಗಳು :

**ಸಮವಸ್ತ್ರ ಮತ್ತು ಪಠ್ಯಪುಸ್ತಕ :**

- ವಿದ್ಯಾರ್ಥಿವೇತನ, ಚಿಣ್ಣರ ಕರ್ನಾಟಕ ದರ್ಶನ ಸೌಲಭ್ಯಗಳು ಈ ಮಕ್ಕಳಿಗೂ ಅನ್ವಯವಾಗುತ್ತದೆ.
- ಪಠ್ಯ ಪುಸ್ತಕ ಮತ್ತು ಸಮವಸ್ತ್ರಗಳನ್ನು ಸಮೀಪದ ಶಾಲೆ ಮುಖ್ಯಸ್ಥರಿಗೆ ಮಕ್ಕಳ ಸಂಖ್ಯೆಗಳಿಗನುಗುಣವಾಗಿ ಬೇಡಿಕೆಯನ್ನು ಸಲ್ಲಿಸಿ ಪಡೆದು ಮಕ್ಕಳಿಗೆ ವಿತರಿಸಿ ದಾಖಲೆ ನಿರ್ವಹಿಸುವುದು.
- ಮಕ್ಕಳ ಕಲಿಕಾ ಸಾಮಗ್ರಿಗೆ ದೊರೆಯುವ ಹಣ ಬಳಸಿ ಸ್ಲೇಟ್ ಬಳಪದ ಪೊಟ್ಟಣ (02) 200 ಪುಟದ ನೋಟ್ ಪುಸ್ತಕ (2) 200 ಪುಟದ 4 ಗೆರೆ ನೋಟ್ ಪುಸ್ತಕ (02) 200 ಪುಟದ ನೋಟ್ ಪುಸ್ತಕ (02) ಕ್ರೆಯಾನ್ 1 ಬಾಕ್ಸ್, ಪೆನ್ಸಿಲ್ ಬಾಕ್ಸ್, ಸ್ಕೇಲ್, ಪೆನ್, ಪೆನ್ಸಿಲ್ ಇತ್ಯಾದಿ ಪ್ರತಿ ಮಗುವಿಗೆ ನೀಡಬೇಕು.

**ಮಧ್ಯಾಹ್ನದ ಬಿಸಿಯೂಟ :**

- ಪೂರಕ ಶಾಲೆಯು ನಡೆಯುವ ಸಮೀಪದ ನಿಗಧಿಪಡಿಸಿದ ಶಾಲಾ ಮುಖ್ಯ ಶಿಕ್ಷಕರು ಕೇಂದ್ರದ ಮಕ್ಕಳ ಸಂಖ್ಯೆಗಳಿಗನುಗುಣವಾಗಿ ಆಹಾರದ ಬೇಡಿಕೆಯನ್ನು ಬಿ.ಇ.ಓ ರವರಿಗೆ ಸಲ್ಲಿಸಿ ಆಹಾರ ಮತ್ತು ಸಾದಿಲ್ವಾರು ಹಣವನ್ನು ಪಡೆಯುವುದು.
- ಸಮೀಪದ ಶಾಲೆಯ ಮಧ್ಯಾಹ್ನದ ಊಟವನ್ನು ತಯಾರಿಸಿ ಕೇಂದ್ರಕ್ಕೆ ಕಳುಹಿಸಿಕೊಡಬೇಕು. ಈ ಸಂಬಂಧ ಸಾಗಾಣಿಕೆ ಮಾಡಲು ಅಥವಾ ಊಟವನ್ನು ಕೊಂಡೊಯ್ಯಲು ಅವಶ್ಯವಿದ್ದಲ್ಲಿ ಒಬ್ಬರನ್ನು ನೇಮಿಸಿಕೊಳ್ಳಬೇಕು. ಇದಕ್ಕಾಗಿ ತಗಲುವ ವೆಚ್ಚವನ್ನು ಅಕ್ಷರ ದಾಸೋಹ ವಿಭಾಗದಿಂದ ಪಡೆಯುವುದು (ಆದೇಶ ಸಂಖ್ಯೆ ಆಯುಕ್ತರು ಅ.ಸ.ಪ. ಎಂ.2• ಅದಾಸಾ ವೆಚ್ಚ 105–06 ದಿನಾಂಕ : 14.12.2005)
- ಊಟ ಕೊಂಡೊಯ್ಯಲು ಅಗತ್ಯವಾದ ಪರಿಕರಗಳನ್ನು ಶಾಲಾ ಅನುದಾನ ಅಥವಾ ಅಕ್ಷರ ದಾಸೋಹ ಗೋಣಿ ಚೀಲ ಮಾರಾಟದಿಂದ ಬಂದಿರುವ ಹಣದಲ್ಲಿ ಖರೀದಿಸಬಹುದು.
- ತಾಲ್ಲೂಕಿನಲ್ಲಿ ಎಲ್ಲಿಯಾದರೂ ಹೆಚ್ಚು ಪೀಠೋಪಕರಣಗಳು ಹಾಗು ಪಾಠೋಪಕರಣಗಳು ಇದ್ದಲ್ಲಿ ಅವುಗಳನ್ನು ಬ್ರಿಡ್ಜ್ ಕೋರ್ಸ್‌ಗಳಿಗೆ ಒದಗಿಸುವ ವ್ಯವಸ್ಥೆಯನ್ನು ತಾಲ್ಲೂಕಿನ ಬಿ.ಇ.ಓ.ಗಳು ಮಾಡಬೇಕು.

  ಪೂರಕ ಶಾಲೆಯ ಮತ್ತು ತರಗತಿ ಕೋಣೆಯ ಸನ್ನಿವೇಶ ಕಲಿಕೆಗೆ ಪೂರಕವಿರುವಂತೆ ಸಜ್ಜುಗೊಳಿಸುವ ಜವಾಬ್ದಾರಿಯು ಬ್ಲಾಕ್ ಶಿಕ್ಷಣಾಧಿಕಾರಿಯವರದಾಗಿದೆ.

**ಬೋಧಿಸಬೇಕಾದ ಪಠ್ಯವಸ್ತು / ಪುಸ್ತಕ :**

- ಪೂರಕ ಶಾಲೆಯಲ್ಲಿ ಮಕ್ಕಳನ್ನು ಆಕರ್ಷಿಸಲು ಪೂರಕವಾಗುವ ಚಟುವಟಿಕೆಗಳ ಜೊತೆಗೆ ಆರಂಭದ 30 ದಿನಗಳು ಚಿಣ್ಣರ ಅಂಗಳ ಪಠ್ಯವಸ್ತುವನ್ನು ಅಗತ್ಯ ಎನಿಸಿದಲ್ಲಿ ಬೋಧಿಸುವುದು.
- ನಂತರ ಮಕ್ಕಳನ್ನು ಮೌಲ್ಯಮಾಪನ ಮಾಡಿ ವಯಸ್ಸು ಮತ್ತು ಕಲಿಕೆಯ ಆಧಾರದ ಮೂಲಕ ತರಗತಿವಾರು ಗುಂಪುಮಾಡಿಕೊಳ್ಳುವುದು
- ನಂತರದಲ್ಲಿ ಔಪಚಾರಿಕ ಪಠ್ಯಕ್ರಮವನ್ನು ಅನುಸರಿಸಿ ಶಾಲೆಯಲ್ಲಿ ಬೋಧಿಸುವುದು.
- ಪ್ರತಿ ದಿನದ ಬೋಧನೆಯ ಅವಧಿಯು 320 ನಿಮಿಷಕ್ಕಿಂತ ಕಡಿಮೆ ಇರಬಾರದು
- ಪೂರಕ ಶಾಲೆಯಲ್ಲಿ ಪ್ರತಿ ದಿವಸ ಬೆಳಗ್ಗೆ ಅರ್ಧ ಗಂಟೆ ಕಾಲ ಯೋಗ, ಧ್ಯಾನ, ಪ್ರಾರ್ಥನೆ ಹಾಗೂ ಸಾಯಂಕಾಲ ವೇಳೆ ಕ್ರೀಡಾ ಚಟುವಟಿಕೆಗಳು, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಬೇಕು. ಅವಶ್ಯಕವಿರುವ ಕ್ರೀಡಾ ಸಾಮಗ್ರಿಗಳನ್ನು ಔಪಚಾರಿಕ ಶಾಲೆಯಿಂದ ಪಡೆಯುವುದು.
- ತಿಂಗಳಿಗೊಮ್ಮೆ ಮಕ್ಕಳನ್ನು ಹತ್ತಿರದ ಪ್ರೇಕ್ಷಣೀಯ, ಐತಿಹಾಸಿಕ ಸ್ಥಳ, ಪಂಚಾಯ್ತಿ, ಅಂಚೆ ಕಛೇರಿ ಬ್ಯಾಂಕ್ ಇತ್ಯಾದಿ ಸ್ಥಳಗಳಿಗೆ ಹೊರಸಂಚಾರ / ಕ್ಷೇತ್ರ ಭೇಟಿ ಕಾರ್ಯಕ್ಕಾಗಿ ಸ್ವಯಂಸೇವಕರು ಕರೆದೊಯ್ಯಬೇಕು.

  ಚಿಣ್ಣರ ಕರ್ನಾಟಕ ದರ್ಶನದಲ್ಲಿ ಇಲ್ಲಿನ ಅರ್ಹ ಮಕ್ಕಳಿಗೆ ಆದ್ಯತೆ ನೀಡಬೇಕು.

**ಬೋಧನಾ ಕಲಿಕೆ ಸಾಮಗ್ರಿ :**

- ತರಬೇತಿಯಲ್ಲಿ ನೀಡಿದ ಮಾರ್ಗದರ್ಶನದಂತೆ ಅವಶ್ಯವಿರುವ ಕಲಿಕಾ ಸಾಮಗ್ರಿಗಳನ್ನು ಸ್ವಯಂ ಸೇವಕರೇ ಸ್ವತಃ ತಯಾರಿಸಬೇಕು. ಉದಾ : ಮಿಂಚುಪಟ್ಟಿ ಚಾರ್ಟ್‌ಗಳ ಮಾದರಿಗಳು ಇತ್ಯಾದಿ
- ಸ್ಥಳೀಯವಾಗಿ ದೊರೆಯಬಹುದಾದ ವಸ್ತುಗಳನ್ನು ಸಂಗ್ರಹಿಸುವುದು.
- ಹತ್ತಿರದ ಔಪಚಾರಿಕ ಶಾಲೆಯಲ್ಲಿರುವ ಎಲ್ಲಾ ವಿಷಯಗಳ ಕಲಿಕಾ ಸಾಮಗ್ರಿಗಳನ್ನು ಎರವಲು ಪಡೆದುಬಳಸಬೇಕು

  ಬಿಡುವಿನ ವೇಳೆಯಲ್ಲಿ ಮಕ್ಕಳೇ ಕಲಿಕಾ ಸಾಮಗ್ರಿ ತಯಾರಿಸುವುದು.

  ವಿವಿಧ ಯೋಜನೆಗಳಡಿಯಲ್ಲಿ (ಸ್ವಸ್ಥ ಪ್ಲಸ್) ನೀಡುವ ಕಲಿಕಾ ಸಮಗ್ರಿಗಳನ್ನು ಹತ್ತಿರದ ಶಾಲೆಯಿಂದ ಪಡೆದು ಉಪಯೋಗಿಸುವುದು

**ನಿರ್ವಹಿಸಬೇಕಾದ ದಾಖಲೆಗಳು**

- ಶೈಕ್ಷಣಿಕ ದಾಖಲೆಗಳು

  ಪಠ್ಯವಸ್ತುವಿನ ವಾರ್ಷಿಕ ಯೋಜನೆ

  ಪಾಠ ಯೋಜನೆ

  ಮಕ್ಕಳ ಪ್ರಗತಿ ಪತ್ರ

  ವೇಳಾಪಟ್ಟಿ

- ಆಡಳಿತಾತ್ಮಕ ದಾಖಲೆಗಳು

  ಮಕ್ಕಳ / ಅಧ್ಯಾಪಕರ ಹಾಜರಾತಿ ದಾಖಲೆ

  ಪ್ರವೇಶ ದಾಖಲೆ

  ಸಂದರ್ಶನ ದಾಖಲೆ

  ಸೌಲಭ್ಯಗಳ ವಿತರಣೆ ದಾಖಲೆ

**ಉಸ್ತುವಾರಿ / ವರದಿ ಸಲ್ಲಿಕೆ :**

- ಪೂರಕ ಶಾಲೆಯನ್ನು ಇಲಾಖೆಯೇ ನಡೆಸಲು ಅಥವಾ ಸ್ವಯಂ ಸೇವಾ ಸಂಸ್ಥೆಯೇ ನಡೆಸಲಿ, ಇಲಾಖಾಧಿಕಾರಿಗಳು ಉಸ್ತುವಾರಿ ಮಾಡಬೇಕು.
- ತಿಂಗಳಿಗೊಮ್ಮೆ ಔಪಚಾರಿಕ ಶಾಲೆಯ ಮುಖ್ಯಸ್ಥರು, ತಿಂಗಳಿಗೆ ಎರಡು ಬಾರಿ ಸಿ.ಆರ್.ಪಿ., ತಿಂಗಳಿಗೊಮ್ಮೆ ಬಿ.ಇ.ಓ., ಬಿ.ಆರ್.ಸಿ. ರವರು ಭೇಟಿ ನೀಡಿ ಉಸ್ತುವಾರಿ ಪರಿಶೀಲಿಸಿ ಹಿಮ್ಮಾಹಿತಿ ನೀಡಬೇಕು.
- ಜಿಲ್ಲಾ ಹಂತದಲ್ಲಿನ ಡಿ.ಡಿ.ಪಿಐ, ಡಿ.ವೈ.ಪಿ.ಸಿ. ಎಸ್.ಐ., ಪ್ರಿನಿಸಿಪಾಲ್, ನೋಡೆಲ್ ಅಧಿಕಾರಿಗಳು ಕನಿಷ್ಠ 2 ತಿಂಗಳಿಗೊಮ್ಮೆ ಭೇಟಿ ನೀಡಬೇಕು.
- ಭೇಟಿ ನೀಡದ ಎಲ್ಲಾ ಅಧಿಕಾರಿಗಳು ಮಕ್ಕಳ ಹಾಜರಾತಿ, ಕಲಿಕೆ, ಮೂಲಭೂತ ಸೌಲಭ್ಯ, ಆರ್ಥಿಕ ಸ್ಥಿತಿ ಸೌಲಭ್ಯಗಳ ಬಳಕೆ, ಹಿಂದಿನ ಭೇಟಿಗೆ ಅನುಪಾಲನೆ ಇವುಗಳ ಬಗ್ಗೆ ವರದಿಯಲ್ಲಿ ಪ್ರಸ್ತಾಪಿಸಿ, ವರದಿಯನ್ನು ತಾಲ್ಲೂಕು ಹಂತದಲ್ಲಿ ಬಿ.ಇ.ಓ.ಗೆ, ಜಿಲ್ಲಾ ಹಂತದವರು ತಮ್ಮ ಕಛೇರಿಯ ಮುಖ್ಯಸ್ಥರಿಗೆ ಸಲ್ಲಿಸಬೇಕು.
- ಪ್ರತಿ ಮಾಹೆಯ 1ನೇ ತಾರೀಖು ಶಾಲೆಯಿಂದ ಸಿ.ಆರ್.ಪಿ.ಗೆ 2ನೇ ತಾರೀಖು ಸಿ.ಆರ್.ಪಿ.ಯಿಂದ ಬಿ.ಆರ್.ಸಿ.ಗೆ, 3ನೇ ತಾರೀಖು ಬಿ.ಆರ್.ಸಿ.ಯಿಂದ ಡಿ.ಪಿ.ಓಗೆ 5ನೇ ತಾರೀಖು ಡಿ.ಡಿ.ಪಿ.ಐ. ಯಿಂದ ರಾಜ್ಯ ಕಛೇರಿಗೆ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. (ಹೆಚ್ಚಿನ ವಿವರವಾದ ಮಾಹಿತಿಗಾಗಿ ಇಲಾಖೆಯ ಪೂರಕ ಶಾಲೆಗಳ ಬೋಧಕರ ಕೈಪಿಡಿಯನ್ನು ಅವಲೋಕಿಸುವುದು.)

## 2. ಸಾರಿಗೆ ಸೌಲಭ್ಯ (Transportation Faclity) :

**ಪರಿಕಲ್ಪನೆ :**

ಜನವಸತಿ ಸ್ಥಳವು ಸಮೀಪದ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗೆ ಅನುಕ್ರಮವಾಗಿ ಒಂದು ಅಥವಾ 3 ಕಿ.ಮೀ.ಗಿಂತ ಅಧಿಕವಾಗಿದ್ದು ಆ ವಸತಿ ಸ್ಥಳದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳು ಇದ್ದರೆ ಅವರಿಗೆ ಸೌಲಭ್ಯ ನೀಡಬಹುದು. ಮಕ್ಕಳ ಗರಿಷ್ಠ ಮಿತಿ (ಶಾಲೆಗೆ ಈಗಾಗಲೇ ಹೋಗುತ್ತಿರುವ / ಶಾಲೆಯಿಂದ ಹೊರಗುಳಿದ ಎರಡೂ ವರ್ಗದ ಮಕ್ಕಳು ಸೇರಿ) ಕಿರಿಯ / ಹಿರಿಯ ಪ್ರಾಥಮಿಕ ಶಾಲೆ ತೆರೆಯಲು ರಾಜ್ಯ ಸರ್ಕಾರ ನಿಗದಿಗೊಳಿಸಿದ ಮಕ್ಕಳ ಸಂಖ್ಯೆಗಿಂತ ಕಡಿಮೆ ಇದ್ದಾಗ ಈ ಸೌಲಭ್ಯದ ವಿಸ್ತರಣೆ ಮಾಡಬಹುದು. ಮಕ್ಕಳ ಸಂಖ್ಯೆ ಶಾಲೆ ತೆರೆಯುವಷ್ಟರ ಮಟ್ಟಿಗೆ ಇದ್ದಲ್ಲಿ ಹೊಸದಾಗಿ ಶಾಲೆ ತೆರೆಯುವುದು ಉಚಿತ, ಅಲ್ಲಿಯವರೆಗೆ ಅರ್ಹ ಜನವಸತಿಯ ಅರ್ಹ ಮಕ್ಕಳು ಮಾತ್ರ ಈ ಸೌಲಭ್ಯವನ್ನು ಪಡೆಯುತ್ತಾರೆ.

ಸಾರಿಗೆ ಸೌಲಭ್ಯವನ್ನು 03 ಕ್ರಮಗಳಲ್ಲಿ ನೀಡಬಹುದು. ಶಾಲೆ ಆಯೋಜಿಸುವ ಸಮೂಹ ಸಾರಿಗೆ ವ್ಯವಸ್ಥೆಗಾಗಿ, ಇದು ಸಾಧ್ಯವಾಗದೇ ಹೋದಾಗ ವ್ಯಕ್ತಿಗತವಾಗಿ ಆಯೋಜಿಸಿಕೊಳ್ಳುವ ಸಾರಿಗೆ ವ್ಯವಸ್ಥೆಗಾಗಿ ಪೋಷಕರಿಗೆ ನೇರವಾಗಿ ಹಣ ನೀಡುವ ಕ್ರಮ : ಮೂರನೆಯದಾಗಿ ಬೆಂಗಾವಲಿಗೆ ಪೋಷಕ ವ್ಯವಸ್ಥೆಗೊಳಿಸಿಕೊಂಡಿದ್ದಲ್ಲಿ ಸಾರಿಗೆ ವ್ಯವಸ್ಥೆಯನ್ನು ವಿಸ್ತರಿಸಬಹುದು. ಈ ಎಲ್ಲಾ ಸಂದರ್ಭಗಳು ಶಾಲೆಯಿಂದ ಹೊರಗೆ ಉಳಿದ ಮಕ್ಕಳಿಗೆ ಮಾತ್ರ ಅನ್ವಯಿಸುತ್ತದೆ. 05-06ನೇ ಸಾಲಿನಲ್ಲಿ ಈ ಕುರಿತು ಸೆಪ್ಟೆಂಬರ್ 05ರಲ್ಲಿ ನಡೆದ ಡಿ.ವೈ.ಪಿ.ಸಿ. ಯವರ ಸಭೆಯಲ್ಲಿ ಕೆಲವು ವಿನಾಯಿತಿಯನ್ನು ನೀಡಲಾಗಿತ್ತು. ಆದರೆ 06-07ನೇ ಸಾಲಿನಿಂದ ಸಾರಿಗೆ ಸೌಲಭ್ಯದ ವಿಸ್ತರಣೆ ಕೇವಲ ಅರ್ಹ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಮಾತ್ರ ಎಂಬುದನ್ನು ಸ್ಥಿರೀಕರಿಸಿದೆ. ಆದರೆ ಕೆಲವು ಜಿಲ್ಲೆಗಳು ಉದಾಹರಣೆಗೆ - ಕೊಡಗು, ಶಿವಮೊಗ್ಗ, ಜಿಲ್ಲೆಗಳು ಶಾಲೆಗೆ ಹೋಗುತ್ತಿರುವ, ಆದರೆ ಬಹಳ ದೂರಕ್ರಮಿಸಬೇಕಾದ ಮಕ್ಕಳಿಗೆ ಈ ಸೌಲಭ್ಯ ವಿಸ್ತರಿಸಿರುತ್ತಾರೆ. ವಾರ್ಷಿಕ ಯೋಜನೆಯಲ್ಲಿ ಇಂತಹ ಮಕ್ಕಳಿಗೆ ಮಂಜೂರಾತಿ ದೊರೆತಿದ್ದಲ್ಲಿ ಮಾತ್ರ ಈ ಸೌಲಭ್ಯವನ್ನು ವಿಸ್ತರಿಸಬಹುದು ಎನ್ನುವುದನ್ನು ನೆನಪಿಡಿ.

**ಉದ್ದೇಶಗಳು :**

- ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಮೊದಲ ಆಯಾಮವಾದ "ಸಾರ್ವತ್ರಿಕ ಅವಕಾಶ"ವನ್ನು ಕಲ್ಪಿಸಿಕೊಡುವುದು
- ಶಿಕ್ಷಣ ವಂಚಿತ ಹಾಗೂ ಸಂಕಷ್ಟದಲ್ಲಿ ಇರುವ ಶಾಲೆಯಿಂದ ಹೊರಗೆ ಉಳಿದಿರುವ ಮಕ್ಕಳಿಗೆ ಈ ಕಾರ್ಯತಂತ್ರದ ಮೂಲಕ ನೆರವು ಕಲ್ಪಿಸುವುದು.

- ಪ್ರಾಥಮಿಕ ಶಿಕ್ಷಣದಲ್ಲಿ ಎಲ್ಲಾ ಅರ್ಹ ಮಕ್ಕಳು ಭಾಗವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು ಅಥವಾ ಧಾರಣ ಪ್ರಮಾಣವನ್ನು ಹೆಚ್ಚಿಸುವುದು.
- ಪೋಷಕ ಮತ್ತು ವಿದ್ಯಾರ್ಥಿಗೆ ತನ್ನ ಶಿಕ್ಷಣ ಮುಂದುವರೆಸಲು ಭರವಸೆ ಮತ್ತು ಪ್ರೇರಣೆಯನ್ನು ಒದಗಿಸುವುದು.

**ವ್ಯಾಪ್ತಿ / ಯಾರಿಗಾಗಿ / ಎಲ್ಲಿ ಪ್ರಾರಂಭಿಸಬೇಕು :**

ಈ ಹಿಂದೆ ವಿವರಿಸಿರುವಂತೆ ಈ ಸೌಲಭ್ಯದ ವಿಸ್ತರಣೆಯು ಕೆಳಕಂಡ ಸನ್ನಿವೇಶಗಳಲ್ಲಿ ಜರುಗುತ್ತದೆ.

- ಈ ಸೌಲಭ್ಯ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಮಾತ್ರ
- ಈ ಮಕ್ಕಳು ವಾಸಿಸುತ್ತಿರುವ ಜನವಸತಿ ಕೇಂದ್ರವು ಹತ್ತಿರದ ಕಿರಿಯ / ಹಿರಿಯ ಪ್ರಾಥಮಿಕ ಶಾಲೆಗೆ ಅನುಕ್ರಮವಾಗಿ 01 ಅಥವಾ 03 ಕಿ.ಮೀ ಗಿಂತ ಹೆಚ್ಚು ದೂರದಲ್ಲಿ ಇರಬೇಕು.
- ಈ ಮಕ್ಕಳ ವಯೋಮಿತಿಯ ವ್ಯಾಪ್ತಿ 06-14 ವರ್ಷ.
- ಪೂರಕ ಶಾಲೆಯನ್ನು ಪಡೆಯಲು ಹಿಂದೆ ಸರಿದ ಅರ್ಹ ಜನವಸತಿಯ ಮೇಲಿನ ಮಕ್ಕಳು ಈ ಸೌಲಭ್ಯಕ್ಕೆ ಅರ್ಹರು.

**ಸಾರಿಗೆ ಸೌಲಭ್ಯವನ್ನು ಯಾರು ಅನುಷ್ಠಾನಗೊಳಿಸುತ್ತಾರೆ :**

- ಶಿಕ್ಷಣ ಇಲಾಖೆ ಅಥವಾ ಸರ್ಕಾರೇತರ ಸಂಘಟನೆಗಳು ಈ ಸೌಲಭ್ಯದ ಅನುಷ್ಠಾನವನ್ನು ಕೈಗೆತ್ತಿಕೊಳ್ಳಬಹುದು.
- ಇಲಾಖೆಯು ಈ ಕಾರ್ಯತಂತ್ರವನ್ನು ಕೈಗೆತ್ತಿಕೊಂಡಾಗ ಅನುಷ್ಠಾನದ ಕೊನೆಯ ಘಟಕ ಶಾಲೆ / ಎಸ್.ಡಿ.ಎಂ.ಸಿ. ಯಾಗಿರುತ್ತದೆ. ಏಕೆಂದರೆ ಮಕ್ಕಳ ಧಾರಣ ಪ್ರಮಾಣವನ್ನು ಕಾಯ್ದುಕೊಳ್ಳುವ ಜವಾಬ್ದಾರಿ ಶಾಲೆ / ಎಸ್.ಡಿ.ಎಂ.ಸಿಯದಾಗಿರುತ್ತದೆ.
- ಜೂನ್ ತಿಂಗಳಿಂದ ಮಾರ್ಚ್ ತಿಂಗಳ ಅವಧಿಯ 10 ತಿಂಗಳ ಕಾಲ ಈ ಯೋಜನೆಯನ್ನು ಅನುಷ್ಠಾನಗೊಳಿಸಬೇಕು.
- ಸಮೂಹ ಸಾರಿಗೆ ವ್ಯವಸ್ಥೆ, ವೈಯಕ್ತಿಕ ಸಾರಿಗೆ ವ್ಯವಸ್ಥೆ ಮತ್ತು ಬೆಂಗಾವಲಿನ ಭತ್ಯೆಗಾಗಿ ಈ ಸೌಲಭ್ಯವನ್ನು ಬಳಸಿಕೊಳ್ಳಬಹುದು.
- ಮೇಲಿನ ಮೂರು ವ್ಯವಸ್ಥೆಯನ್ನು ಶಾಲೆ / ಎಸ್.ಡಿ.ಎಂ.ಸಿ. ಆಯೋಜಿಸಬಹುದು. ಒಂದು ವೇಳೆ ಶಾಲೆ / ಎಸ್.ಡಿ.ಎಂ.ಸಿ ಈ ವ್ಯವಸ್ಥೆಯನ್ನು ಕಲ್ಪಿಸಲು ಸಾಧ್ಯವಾಗದೇ ಇದ್ದಾಗ ಸಾರಿಗೆ ವ್ಯವಸ್ಥೆ ಕಲ್ಪಿಸಲು ಪೋಷಕರಿಗೆ ಹಣ ನೀಡಬಹುದು. ಆದರೆ ಈ ಹಣ ಪಡೆಯಲು ಮಗು ಕನಿಷ್ಠ ಪ್ರತಿಶತ 75 ಹಾಜರಾತಿಯನ್ನು ಪಡೆದಿರಬೇಕು. ವಿಶೇಷ ಸಂದರ್ಭಗಳಲ್ಲಿ ಉದಾಹರಣೆಗೆ ಮಗು ಅನಾರೋಗ್ಯದಿಂದ ಶಾಲೆಗೆ ಹಾಜರಾಗದೆ ಇದ್ದಲ್ಲಿ ಹಾಜರಾತಿಯ ಕನಿಷ್ಠ ಮಿತಿ ಅನ್ವಯವಾಗದು.
- ಪ್ರತಿ ತಿಂಗಳ ಕೊನೆಗೆ ಹಾಜರಾತಿಯನ್ನು ಗಮನಿಸಿ ಶಾಲಾ ಮುಖ್ಯಸ್ಥರು ಸಾರಿಗೆ ಕಲ್ಪಿಸಿದವರಿಗೆ ಅಥವಾ ವಿಶೇಷ ಸಂದರ್ಭಗಳಲ್ಲಿ ಪೋಷಕರಿಗೆ ಹಣ ವಿತರಿಸಬಹುದು. ಯಾವುದೇ ಕಾರಣದಿಂದ ಅರ್ಹ ಮಗು ಈ ಸೌಲಭ್ಯದಿಂದ ವಂಚಿತವಾಗದಂತೆ ಬ್ಲಾಕ್ ಶಿಕ್ಷಣಾಧಿಕಾರಿಯವರು ನಿಗಾವಹಿಸುವುದು.
- ಸಮೂಹ ಸಾರಿಗೆ ವ್ಯವಸ್ಥೆಯನ್ನು ಶಾಲೆಯೇ ಕಲ್ಪಿಸುವ ಸಂದರ್ಭದಲ್ಲಿ ಕೊಟೇಶನ್ ಕರೆದು ನಿಯಮಾನುಸಾರ ಮುಂದುವರೆಯುವುದು.
- ಶಾಲೆಯ ಈ ಸೌಲಭ್ಯದ ಅನುಷ್ಠಾನವನ್ನು ಸರ್ಕಾರೇತರ ಸಂಘಟನೆಗಳಿಗೆ ವಹಿಸಲು ಇಚ್ಛಿಸಿದಲ್ಲಿ ಎಸ್.ಡಿ.ಎಂ.ಸಿ. ಮತ್ತು ಸರ್ಕಾರೇತರ ಸಂಘಟನೆಗಳ ನಡುವೆ ಒಪ್ಪಂದ ಏರ್ಪಡಿಸಬೇಕು.

ಈ ನಿಟ್ಟಿನಲ್ಲಿ ಎನ್.ಜಿ.ಓ ಸಂಸ್ಥೆಗಳು ಅರ್ಜಿಯನ್ನು ಸಂಬಂಧಿಸಿದ ಶಾಲೆಗಳಿಗೆ ಸಲ್ಲಿಸಬೇಕು ಹಾಗೂ ಈ ಪ್ರಕ್ರಿಯೆಯನ್ನು ಮುಂದಿನ ಶೀರ್ಷಿಕೆಯಲ್ಲಿ ವಿಸ್ತೃತವಾಗಿ ತಿಳಿಸಿದೆ.

**ಹಣಕಾಸಿನ ಖರ್ಚಿನ ವಿವರ ಮಾನದಂಡಗಳು : (ಪ್ರತಿ ಮಗುವಿಗೆ)**

| 05-06 ಮತ್ತು ಇದಕ್ಕೂ ಮುನ್ನ | 06-07 ನೇ ಸಾಲಿನಲ್ಲಿ | 07-08 ಮತ್ತು ನಂತರ | |
|---|---|---|---|
| | | ಬೆಂಗಳೂರು | ಇತರೆಡೆಗೆ |
| 50/- ರೂ. ಮಾಸಿಕ | 100/- ರೂ. ಮಾಸಿಕ | 250/- ಮಾಸಿಕ | 150/- ಮಾಸಿಕ |

**ಅರ್ಹತೆ :**

ಅರ್ಹ ಜನವಸತಿಯ 06-14 ವಯಸ್ಸಿನ ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಪ್ರತಿ ತಿಂಗಳಿನಲ್ಲಿ ಪ್ರತಿಶತ 75 ಹಾಜರಾತಿ ಪಡೆದ ಮಗು ಈ ಸೌಲಭ್ಯ ಪಡೆಯಲು ಅರ್ಹನು/ಳು.

ಹಣ ವಿತರಣೆ ಜವಾಬ್ದಾರಿಯು ಈ ಸೌಲಭ್ಯಕ್ಕೆ ಅರ್ಹತೆ ಪಡೆದ ಮಗು ಹಾಜರಾಗುವ ಪ್ರಾಥಮಿಕ ಶಾಲೆಯ ಮುಖ್ಯಸ್ಥ / ಎಸ್.ಡಿ.ಎಂ.ಸಿ

**ರೂಢಿಸಬೇಕಾದ ದಾಖಲೆಗಳು :**

- ಅರ್ಹ ಮಕ್ಕಳ ಸಾರಿಗೆ ಸೌಲಭ್ಯ ವಿತರಣೆ ಮಾಡಿರುವುದಕ್ಕೆ ಒಂದು ದಾಖಲೆಯನ್ನು ರೂಢಿಸುವುದು.
- ಹಣವನ್ನು ಚೆಕ್ ಮೂಲಕ ವಿತರಿಸುವುದು.

**ಉಸ್ತುವಾರಿ ಮತ್ತು ವರದಿ ಸಲ್ಲಿಕೆ :**

- ಕ್ಷೇತ್ರ ಮಟ್ಟದ ಎಲ್ಲಾ ಅಧಿಕಾರಿಗಳು ತಮ್ಮ ಪ್ರವಾಸದ ವೇಳೆಯಲ್ಲಿ ಸಾರಿಗೆ ಸೌಲಭ್ಯದ ಕಾರ್ಯತಂತ್ರದ ಅನುಷ್ಠಾನ ಹೇಗೆ ನಡೆಯುತ್ತಿದೆ ಎಂದು ತಮ್ಮ ಭೇಟಿ ವರದಿಯಲ್ಲಿ ಉಲ್ಲೇಖಿಸುವುದು.
- ಸಾರಿಗೆ ಸೌಲಭ್ಯದ ಹಣ ವಿತರಣೆ, ಸರ್ಕಾರೇತರ ಸಂಘಟನೆಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದ ಈ ಕುರಿತು ನಡೆಸಿರುವ ಪ್ರಕ್ರಿಯೆ ಹೇಗೆ ಸಾರಿಗೆ ವ್ಯವಸ್ಥೆ ಕಲ್ಪಿಸಿದೆ, ಅದು ಸುರಕ್ಷಿತವೆ ಇತ್ಯಾದಿ ಸಂಗತಿ ಕುರಿತಂತೆ ಅವಲೋಕನ / ವಿಶ್ಲೇಷಣೆಯನ್ನು ನಡೆಸಿ ಸೂಕ್ತ ಹಿಮ್ಮಾಹಿತಿ ನೀಡುವುದು ಹಾಗೂ ಶಾಲೆಗಳ ಭೇಟಿ ವರದಿಯಲ್ಲಿ ಪ್ರಸ್ತಾಪಿಸುವುದು.

**ಸರ್ಕಾರೇತರ ಸಂಘಟನೆಗಳು ಈ ಕಾರ್ಯತಂತ್ರದಲ್ಲಿ ಭಾಗವಹಿಸುವುದು ಹೇಗೆ ?**

- ಶಾಲೆ / ಎಸ್.ಡಿ.ಎಂಸಿ. ತಾವೇ ಸ್ವತಃ ಈ ಕಾರ್ಯತಂತ್ರವನ್ನು ಮಾಡಲು ಸಾಧ್ಯವಿಲ್ಲದೆ ಇದ್ದಾಗ ಸರ್ಕಾರೇತರ ಸಂಘಟನೆಗಳ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸುವುದು.
- ಈ ಕುರಿತು ವ್ಯಾಪಕ ಪ್ರಚಾರ ನೀಡುವುದು. ಸ್ಥಳೀಯ ಕಛೇರಿಗಳಾದ ಶಾಲೆ / ಗ್ರಾಮ ಪಂಚಾಯಿತಿ / ಬಸ್‌ಸ್ಟ್ಯಾಂಡ್ ಮುಂತಾದ ಸಾರ್ವಜನಿಕರು ಬಂದು ಹೋಗುವ ಸ್ಥಳದಲ್ಲಿ ಈ ಕಾರ್ಯತಂತ್ರದಲ್ಲಿ ಭಾಗವಹಿಸಲು ಎನ್.ಜಿ.ಓಗಳನ್ನು ಆಹ್ವಾನಿಸಲು ಎಸ್.ಡಿ.ಎಂ.ಸಿ ಯವರು ಪ್ರಕಟಣೆಯನ್ನು ನೀಡುವುದು. ಒಂದು ಪ್ರತಿಯನ್ನು ಬ್ಲಾಕ್ ಶಿಕ್ಷಣಾಧಿಕಾರಿ ಕಛೇರಿಗೆ ಕಳುಹಿಸುವುದು.
- ಆಹ್ವಾನಕ್ಕೆ ಪ್ರತಿಸ್ಪಂದಿಸಿರುವ ಸ್ವಯಂ ಸೇವಾ ಸಂಸ್ಥೆಗಳ / ವ್ಯಕ್ತಿಯು ಕಲ್ಪಿಸಬಹುದಾದ ಸಾರಿಗೆ ಸಾಮರ್ಥ್ಯ ಕುರಿತಂತೆ ಶಾಲೆ / ಎಸ್.ಡಿ.ಎಂ.ಸಿ ಹಂತದಲ್ಲಿ ಪರಿಶೀಲಿಸಿ ನಿರ್ಧಾರ ಕೈಗೊಳ್ಳುವುದು.
- ಹಣ ವಿತರಣೆ / ಇತರ ನಿಬಂಧನೆ ಕುರಿತಂತೆ ಒಪ್ಪಂದ (MOU) ಮಾಡಿಕೊಂಡು ಪ್ರತಿಯನ್ನು ಬಿ.ಇ.ಓ. ಕಛೇರಿಗೆ ಕಳುಹಿಸುವುದು.
- ತಿಂಗಳು ತುಂಬಿದ ತರುವಾಯ ಆ ತಿಂಗಳಲ್ಲಿ ಈ ಸೌಲಭ್ಯ ಹೊಂದಲು ಅರ್ಹವಾದ ಮಕ್ಕಳಿಗೆ ಸಾರಿಗೆ ಸೌಲಭ್ಯ ನೀಡುವುದು. ಈ ಹಣವನ್ನು ಎನ್.ಜಿ.ಓ ಸಂಸ್ಥೆಗಳಿಗೆ / ವ್ಯಕ್ತಿಗಳಿಗೆ ನೀಡುವಾಗ ಕ್ರಾಸ್ ಮಾಡಿದ ಚೆಕ್‌ನಲ್ಲಿಯೇ ವಿತರಿಸಬೇಕು.

## 3. 12 ತಿಂಗಳ ವಸತಿ ರಹಿತ ಸೇತುಬಂಧ :

**ಪರಿಕಲ್ಪನೆ :**

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರುವುದು. ಸಾರ್ವತ್ರಿಕ ಅವಕಾಶ ಮತ್ತು ಧಾರಣದ ದೃಷ್ಟಿಯಿಂದ ಅಗತ್ಯವಾಗಿದೆ. ಮಕ್ಕಳು ಶಾಲೆಯಿಂದ ಹೊರಗುಳಿದ ಅಥವಾ ಶಾಲೆಗೆ ದಾಖಲಾಗದೆ ಇರುವಂತಹ ಸನ್ನಿವೇಶಗಳಲ್ಲಿ ಪರಿಸರಕ್ಕೆ ಹೊಂದಿಕೊಂಡಿರುವುದನ್ನು ಕಾಣಬಹುದಾಗಿದೆ. ಈ ಮಕ್ಕಳು ಈಗಾಗಲೇ ಹೊಂದಿಕೊಂಡಿರುವ ಪರಿಸರದಿಂದ ಶಾಲಾ ಪರಿಸರಕ್ಕೆ ಹೊಂದಿಕೊಳ್ಳುವುದು. ಕಲಿಕಾ ಪ್ರಕ್ರಿಯೆಯಲ್ಲಿ ಭಾಗವಹಿಸುವುದರಲ್ಲಿ ಕೊರತೆಯನ್ನು ಕಾಣಬಹುದು. ಮಕ್ಕಳು ನೇರವಾಗಿ ಶಾಲೆಗೆ ಸೇರಿದಲ್ಲಿ ಕಲಿಕೆಯು ಕಷ್ಟವಾಗುವುದರಿಂದ ಮೊದಲು ಸೇತುಬಂಧ ಕಾರ್ಯಕ್ರಮ ನಡೆಸಿ ಅವರಲ್ಲಿನ ಪ್ರಾರಂಭಿಕ ಸಾಮರ್ಥ್ಯಗಳನ್ನು ಗುರುತಿಸಿ, ಚಟುವಟಿಕೆ ಆಧಾರಿತವಾಗಿ ಮತ್ತು ಆನಂದದಾಯಕವಾಗಿ ಕಲಿಸಿ, ಶಿಕ್ಷಣದಲ್ಲಿ ಆಸಕ್ತಿ ಮೂಡಿಸಿ, ಮಕ್ಕಳು ನಿರಂತರವಾಗಿ ಶಾಲೆಗೆ ಹಾಜರಾಗುವಂತೆ ಪ್ರೇರೇಪಿಸುವ ಕಾರ್ಯತಂತ್ರ ಇದು ಚಿಣ್ಣರ ಅಂಗಳ ಕಾರ್ಯಕ್ರಮ, ಸಾಮಾನ್ಯವಾಗಿ ಬೇಸಿಗೆಯಲ್ಲಿ ನಡೆಯುವ ಕಾರ್ಯತಂತ್ರವಾಗಿದೆ. ಚಿಣ್ಣರ ಅಂಗಳ ನಡೆಯುವ ಸಮಯದಲ್ಲಿ ವಲಸೆ ಅಥವಾ ಬೇರೆ ಕಾರಣದಿಂದ ಅನೇಕ ಮಕ್ಕಳು ದಾಖಲಾಗದೇ ಇರಬಹುದು. ಅಥವಾ ಬೇಸಿಗೆ ಚಿಣ್ಣರ ಅಂಗಳದಲ್ಲಿ ಪಡೆದ ಕಲಿಕೆ ಶಾಲೆಗೆ ಸೇರಲು ಕಡಿಮೆ ಇರಬಹುದು. ಜೊತೆಗೆ ಶಾಲೆ ಪ್ರಾರಂಭವಾದ ಸಮಯದಲ್ಲಿ ಸಿಗುವ ಶಾಲೆಯಿಂದ ಹೊರಗುಳಿದ ಮಕ್ಕಳು ಹಾಗೂ ವಸತಿಯುತ ಸೇತುಬಂಧ ಕೇಂದ್ರದಲ್ಲಿರಲು ಇಚ್ಛಿಸದೆ ಇರುವ ಮಕ್ಕಳಿಗಾಗಿ 12 ತಿಂಗಳ ವಸತಿ ರಹಿತ ಸೇತುಬಂಧ ಕಾರ್ಯತಂತ್ರವನ್ನು ಅಳವಡಿಸಬಹುದಾಗಿದೆ. ದೀರ್ಘಕಾಲಿಕ ಅವಧಿಯ ಸೇತುಬಂಧ ಶಿಕ್ಷಣವನ್ನು ಬೇಡುವ ಹಿರಿಯ ವಯಸ್ಸಿನ (11–14) ಶಾಲೆಯಿಂದ ಹೊರಗೆ ಉಳಿದ ಮಕ್ಕಳಿಗೆ ಅಳವಡಿಸುವ ಕಾರ್ಯತಂತ್ರವಿದು.

**ಉದ್ದೇಶ :**

- ದೀರ್ಘ ಕಾಲೀನ ಸೇತುಬಂಧ ಶಿಕ್ಷಣ ಅಗತ್ಯವಿರುವ ಮಕ್ಕಳಿಗೆ ಸೇತುಬಂಧ ಶಿಕ್ಷಣ ಒದಗಿಸಲು.
- ಹಿರಿಯ ವಯಸ್ಸಿನ ಮಕ್ಕಳು ತಮ್ಮ ವಯೋಮಾನಕ್ಕೆ ಅನುಗುಣವಾದ ತರಗತಿಗೆ ಸೇರಲು ಬಯಸುವುದರಿಂದ ಅವರನ್ನು ಹಿರಿಯ ತರಗತಿಗಳಿಗೆ ಸಜ್ಜುಗೊಳಿಸುವ ಸಲುವಾಗಿ.

**ವ್ಯಾಪ್ತಿ :**

- 11 ರಿಂದ 14 ವಯೋಮಿತಿಯ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಈ ಕೇಂದ್ರಕ್ಕೆ ದಾಖಲಿಸಬಹುದು. ಅನಿವಾರ್ಯ ಪ್ರಕರಣಗಳಲ್ಲಿ ಕಿರಿಯ ಹಂತದ ಮಕ್ಕಳಿಗೂ ಪ್ರವೇಶ ನೀಡಬಹುದು.

  ಈಗಾಗಲೇ ಇರುವ 12 ತಿಂಗಳ ವಸತಿಯುತ ಕೇಂದ್ರದಲ್ಲಿರಲು ಬಯಸದ ಶಾಲೆಯಿಂದ ಹೊರಗುಳಿದ ಮಕ್ಕಳು ವ್ಯಾಪ್ತಿಗೆ ಇರುತ್ತಾರೆ.

  ಒಂದು ಕೇಂದ್ರದಲ್ಲಿ ಗರಿಷ್ಠ 25 ಮಕ್ಕಳು ಇರಲು ಅವಕಾಶ ಕಲ್ಪಿಸುವುದು.

**ಎಲ್ಲಿ ನಡೆಸಬೇಕು :**

- ಶಾಲೆ, ಸಮುದಾಯದ ಕಟ್ಟಡಗಳು ಅಥವಾ ಸಮುದಾಯ ನೀಡಿದ ಕಟ್ಟಡದಲ್ಲಿ ಈ ಕೇಂದ್ರವನ್ನು ನಡೆಸಬಹುದು
- ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳು ಇರುವ ಜನವಸತಿ ಪ್ರದೇಶಗಳಲ್ಲಿ ಈ ಕೇಂದ್ರವನ್ನು ತೆರೆಯುವುದು.
- ವಸತಿಯುತ ಕೇಂದ್ರಕ್ಕೆ ಬಾರಲು ಇಚ್ಛಿಸದ ಮಕ್ಕಳಿರುವ ಜನವಸತಿ ಪ್ರದೇಶಗಳಲ್ಲಿ ತೆರೆಯುವುದು.

**ಯಾರು ನಡೆಸಬೇಕು :**

- ಸಂಬಂಧಿಸಿದ / ಹತ್ತಿರದ ಶಾಲೆಗಳ ಎಸ್.ಡಿ.ಎಂ.ಸಿ. ವತಿಯಿಂದ ಆ ಶಾಲೆಯ ಮುಖ್ಯ ಶಿಕ್ಷಕರ ಉಸ್ತುವಾರಿಯಲ್ಲಿ ನಡೆಸುವುದು ಅನಿವಾರ್ಯ ಪ್ರಕರಣಗಳಲ್ಲಿ ಸಿ.ಎ.ಇ.ಒ/ಸಿ.ಆರ್.ಪಿ.ಯವರ ನೇರ ಉಸ್ತುವಾರಿಯಲ್ಲಿ ಈ ಕೇಂದ್ರ ನಡೆಸಬಹುದು.
- ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ನಡೆಸಲು ಮುಂದೆ ಬಂದಲ್ಲಿ ಅವರಿಗೆ ವಹಿಸಬಹುದು. ಆದರೂ ಪೂರ್ಣ ಉಸ್ತುವಾರಿಯು ಇಲಾಖೆಯದ್ದಾಗಿರುತ್ತದೆ.

## ಹಣಕಾಸಿನ ಖರ್ಚು ವಿವರ

| | | |
|---|---|---|
| ■ ಪ್ರತಿ ಮಗುವಿಗೆ ಪ್ರತಿ ತಿಂಗಳಿಗೆ 250/- ರೂ.ಗಳು | | **ವಿವರ (25 ಮಕ್ಕಳಿಗೆ)** |
| ಊಟಕ್ಕೆ (5ರೂ X 25ದಿನ X 12ತಿಂಗಳು X 25ಮಕ್ಕಳು | = | 37,500.00 |
| ಸ್ವಯಂ ಸೇವಕರಿಗೆ ಗೌರವಧನ | = | 30,000.00 |
| ಸಾದಿಲ್ವಾರು / ಟಿ.ಎಲ್.ಎಂ. | = | 2,500.00 |
| ಮಕ್ಕಳಿಗೆ ಬರೆಯುವ ಸಾಮಗ್ರಿ | = | 5,000.00 |
| **ಒಟ್ಟು** | = | **75,000.00** |

## ಗಮನಿಸಿ

- ಒಂದು ಕೇಂದ್ರದಲ್ಲಿ 25 ಮಕ್ಕಳು ಇದ್ದಾಗ ಮೇಲಿನಂತೆ ಖರ್ಚು ಮಾಡಬಹುದು/ ಮಕ್ಕಳ ಸಂಖ್ಯೆ ಕಡಿಮೆ ಇದ್ದರೆ ಸಂಬಂಧಿಸಿದ ವೆಚ್ಚವು ಮಕ್ಕಳ ಸಂಖ್ಯೆಗೆ ಸಂವಾದಿಯಾಗಿ ಕಡಿಮೆಯಾಗುತ್ತದೆ.
- ಸಾದಿಲ್ವಾರು ಮತ್ತು ಬರೆಯುವ ಸಾಮಗ್ರಿ
- ಪ್ರತಿಶತ 10 ರಷ್ಟು ಹಣವನ್ನು ಮರು ಹೊಂದಾಣಿಕೆ ಮಾಡಿಕೊಳ್ಳಬಹುದು.

## ಬೋಧಿಸಬೇಕಾದ ಪಠ್ಯವಸ್ತು

- ಚಿಣ್ಣರ ಅಂಗಳ ಪುಸ್ತಕಗಳನ್ನು ಇಲ್ಲಿ ಬಳಸುವುದು
- ಈ ಪುಸ್ತಕಗಳನ್ನು ಕಲಿತ ಬಳಿಕ ಅರ್ಹ ಮಕ್ಕಳನ್ನು ಮುಖ್ಯವಾಹಿನಿಗೆ ತರಬಹುದು (ಕಿರಿಯ ವಯಸ್ಸಿನ)
- ಚಿಣ್ಣರ ಅಂಗಳ ಅಭ್ಯಾಸ ಪುಸ್ತಕಗಳನ್ನು ದೀರ್ಘಕಾಲ ಸೇತುಬಂಧ ಶಿಕ್ಷಣ ಬೇಡುವ ಮಕ್ಕಳಿಗೆ ಬೋಧಿಸಬಹುದು.

## ಯಾರು ಬೋಧಿಸಬೇಕು

- ಈ ಕೇಂದ್ರಕ್ಕೆ ಇಲಾಖೆಯಿಂದ ಒಬ್ಬ ಶಿಕ್ಷಕರನ್ನು ಕಡ್ಡಾಯವಾಗಿ ನಿಯೋಜಿಸುವುದು
  ತರಬೇತಿ ಹೊಂದಿದ ಸ್ವಯಂ ಸೇವಕರನ್ನು ಸಂಘದ / ಸ್ವಯಂಸೇವಾ ಸಂಸ್ಥೆಗಳ ಮೂಲಕ ತೆಗೆದುಕೊಳ್ಳಬೇಕು.
- ಈ ಕೇಂದ್ರ ನಡೆಯಲು ಶಾಲಾ ಆವರಣದಲ್ಲಿಯೇ ವ್ಯವಸ್ಥೆ ಕಲ್ಪಿಸಿಕೊಳ್ಳತಕ್ಕದ್ದು ಅಥವಾ ಸಮುದಾಯದ ಸಹಾಯದಿಂದ (ಖಾಲಿ ಮನೆ, ದೇವಸ್ಥಾನದ ಹಜಾರ) ಸ್ಥಳಾವಕಾಶ ಕಲ್ಪಿಸಿಕೊಳ್ಳುವುದು.
- ಈ ಕೇಂದ್ರದಲ್ಲಿ ಮಕ್ಕಳು ಕಲಿಯುವ ವೇಗವನ್ನು ಆಧರಿಸಿ ಅರ್ಹರನ್ನು ಮುಖ್ಯವಾಹಿನಿಗೆ ದಾಖಲಿಸುವುದು.

## ನಿರ್ವಹಿಸಬೇಕಾದ ದಾಖಲೆಗಳು

### ಆಡಳಿತ ದಾಖಲೆಗಳು

- ದಾಖಲಾತಿ ವಹಿ
- ಹಾಜರಾತಿ ವಹಿ (ಶಿಕ್ಷಕರು - ಮಕ್ಕಳು)
- ಹಣಕಾಸು ನಿರ್ವಹಣಾ ವಹಿ
- ಭೇಟಿ ಪುಸ್ತಕ

**ಶೈಕ್ಷಣಿಕ ದಾಖಲೆಗಳು**

- ಪೂರ್ವ ಪರೀಕ್ಷೆ ಮತ್ತು ಸಾಫಲ್ಯ ಪರೀಕ್ಷೆಗಳ ದಾಖಲೆಗಳು
- ಸಾಪ್ತಾಹಿಕ ಪ್ರಗತಿ ನಮೂನೆಗಳು ಮತ್ತು ದಾಖಲೆಗಳು
- ಶಿಕ್ಷಕರ ದಿನಚರಿ

**ವೇಳಾಪಟ್ಟಿ**

- 10-00 - 11.45 – ಕನ್ನಡ
  11-45 - 1.00 – ಗಣಿತ
  1-00 - 1.45 – ಊಟದ ವಿರಾಮ
  1-45 - 2.45 – ಇಂಗ್ಲೀಷ್
  2-45 - 4.00 – ಪರಿಸರ ಅಧ್ಯಯನ / ವಿಜ್ಞಾನ / ಗಣಿತ

**ಟಿಪ್ಪಣಿ :** ಸ್ಥಳೀಯ ಸನ್ನಿವೇಶಗಳಿಗೆ ಅನುಗುಣವಾಗಿ ಪ್ರಾರಂಭಿಕ ವೇಳೆಯನ್ನು ಬದಲಾಯಿಸಿಕೊಳ್ಳಬಹುದು. ಆದರೆ ಬೋಧನಾ ಅವಧಿಯನ್ನು ಕಡಿಮೆ ಮಾಡಬಾರದು.

**ಅಧ್ಯಾಪಕರು ಮತ್ತು ಸ್ವಯಂಸೇವಕರು**

ಒಬ್ಬ ಅಧ್ಯಾಪಕರನ್ನು ತಪ್ಪದೇ ನಿಯೋಜಿಸಬೇಕು

ಒಬ್ಬ ಸ್ವಯಂ ಸೇವಕರನ್ನು ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಬೇಕು.

* * * * *

# ಮದರಸ ಮತ್ತು ಸಂಸ್ಕೃತ ಶಾಲೆಗಳು

**ಪರಿಕಲ್ಪನೆ :**

ಔಪಚಾರಿಕ ಶಿಕ್ಷಣವನ್ನು ಶಾಲಾ ವಯಸ್ಸಿನ ಎಲ್ಲ ಮಕ್ಕಳು ಪಡೆಯಬೇಕೆನ್ನುವುದು ಸಂವಿಧಾನದ ಆಶಯ. ಕೆಲವು ಮದರಸ ಮತ್ತು ಸಂಸ್ಕೃತ ಶಾಲೆಗಳು ಧಾರ್ಮಿಕ ಶಿಕ್ಷಣವನ್ನು ಮಾತ್ರ ಅಲ್ಲಿನ ಮಕ್ಕಳಿಗೆ ನೀಡುತ್ತಿವೆ. ಈ ಮಕ್ಕಳು ಹತ್ತಿರದ ಯಾವುದೇ ಔಪಚಾರಿಕ ಕೇಂದ್ರಗಳಿಗೆ ಹಾಜರಾಗುತ್ತಿಲ್ಲ. ವಾಸ್ತವಿಕವಾಗಿ ಇವರು ಭಾಷೆಯಲ್ಲಿ ಪ್ರಭುತ್ವಪೂರ್ಣ ಕಲಿಕೆಯನ್ನು ಮಾಡಿರುತ್ತಾರೆ. ಆದರೂ ಔಪಚಾರಿಕ ಶಿಕ್ಷಣದಲ್ಲಿ ಬರುವ ವಿಶ್ವಾಸ, ಸಮಾಜಪರಿಚಯ, ಆಂಗ್ಲಭಾಷೆ ಮತ್ತಿತರ ವಿಷಯಗಳನ್ನು ಕಲಿಯುವಲ್ಲಿ ವಂಚಿತರಾಗಿರುತ್ತಾರೆ. ಇದರಿಂದ ಈ ಮಕ್ಕಳು ಸಾಮಾಜೀಕರಣದ ಕೊರತೆಯನ್ನು ಮುಂದಿನ ಬದುಕಿನಲ್ಲಿ ಅನುಭವಿಸುತ್ತಾರೆ. ಈ ಕಂದರವನ್ನು ತೊರೆಯಲು ಸರ್ಕಾರವು ಇಂತಹ ಸಂಸ್ಥೆಗಳಿಗೆ ಸರ್ವ ಶಿಕ್ಷಣ ಅಭಿಯಾನದ ಮೂಲಕ ಸಹಾಯಧನವನ್ನು ನೀಡುವ ಅವಕಾಶವನ್ನು ಕಲ್ಪಿಸಿರುತ್ತದೆ.

ಅಂಕಿ ಸಂಖ್ಯೆಗಳ ಅನುಸಾರ 72 ಮದರಸಗಳಿಗೆ ಕೇಂದ್ರ ಸರ್ಕಾರದ ಅನುದಾನ ದೊರೆಯುತ್ತಿದೆ. ಸುಮಾರು 681 ಅನುದಾನರಹಿತ ಮದರಸಗಳು ರಾಜ್ಯದಲ್ಲಿ ಇವೆ. 140 ಮದರಸಗಳು ಈಗಾಗಲೇ ಸರ್ವಶಿಕ್ಷಣ ಅಭಿಯಾನದ ಮೂಲಕ ಅನುದಾನವನ್ನು ಪಡೆಯುತ್ತಿದೆ. ಇನ್ನುಳಿದ ಮದರಸಗಳು ಕೂಡ ಅನುದಾನದ ಕಕ್ಷೆಗೆ ಒಳಪಡಬೇಕಾಗಿದೆ.

**ಉದ್ದೇಶ :**

- ಕೇವಲ ಧಾರ್ಮಿಕ ಶಿಕ್ಷಣವನ್ನು ಪಡೆಯುತ್ತಿರುವ ಮಕ್ಕಳಿಗೆ ಔಪಚಾರಿಕ ಶಿಕ್ಷಣವನ್ನು ನೀಡುವ ಸಲುವಾಗಿ.
- ದೇಶದ ಎಲ್ಲಾ ಮಕ್ಕಳ ಸಮಾನವಾದ / ಸಾದೃಶವಾದ ಶಿಕ್ಷಣವನ್ನು ಪಡೆಯಬೇಕು ಎಂಬ ದೃಷ್ಟಿಯಿಂದ.

**ವ್ಯಾಪ್ತಿ :**

- ನೋಂದಾಯಿತ ಅಥವಾ ಅಂಗೀಕೃತ ಮದರಸ ಅಥವಾ ಸಂಸ್ಕೃತ ಶಾಲೆಯಲ್ಲಿ ಕೇವಲ ಧಾರ್ಮಿಕ ಶಿಕ್ಷಣವನ್ನು ಮಾತ್ರ ಪಡೆಯುತ್ತಿದ್ದು ಔಪಚಾರಿಕ ಶಿಕ್ಷಣದಿಂದ ವಂಚಿತರಾಗಿರುವ 6-14 ವಯೋಮಾನದ ಮಕ್ಕಳು.
- ಕೇಂದ್ರ ಸರ್ಕಾರದ ಸಹಾಯಧನ ಪಡೆದು ನಡೆಸಲಾಗುತ್ತಿರುವ ಮದರಸ ಅಥವಾ ಸಂಸ್ಕೃತ ಶಾಲೆಗಳಿಗೆ 'ಪ್ರಸ್ತುತ ಸೌಲಭ್ಯವನ್ನು ವಿಸ್ತರಿಸಬಾರದು (ಸ.ಶಿ.ಅ ಅನುಧಾನ)
- ಔಪಚಾರಿಕ ಶಿಕ್ಷಣ ನೀಡಲು ಸಮ್ಮತ ಸೂಚಿಸಿ ಮುಂದೆ ಬರುವ ಮದರಸ ಮತ್ತು ಸಂಸ್ಕೃತ ಶಾಲೆಗಳು ಈ ಸೌಲಭ್ಯಕ್ಕೆ ಅರ್ಹತೆ ಪಡೆಯುತ್ತವೆ
- ಔಪಚಾರಿಕ ಕೇಂದ್ರವನ್ನು ಮದರಸ ಅಥವಾ ಸಂಸ್ಕೃತ ಶಾಲೆಗಳ ನಡೆಯುವ ಸ್ಥಳದಲ್ಲಿ ಅಥವ ಆ ಸಂಸ್ಥೆಯು ವ್ಯವಸ್ಥೆಗೊಳಿಸುವ ಕಟ್ಟಡದಲ್ಲಿ ನಡೆಸಬಹುದು.

**ಯಾರು ನಡೆಸುತ್ತಾರೆ :**

- ಮದರಸ ಮತ್ತು ಸಂಸ್ಕೃತ ಶಾಲೆಗಳನ್ನು ನಡೆಸುತ್ತಿರುವ ಧಾರ್ಮಿಕ ಸಂಸ್ಥೆಗಳೇ ಈ ಕೇಂದ್ರಗಳನ್ನು (ಔಪಚಾರಿಕ ಶಿಕ್ಷಣ ಕೇಂದ್ರಗಳ) ನಡೆಸುತ್ತಾರೆ.

**ಅವಧಿ :**

- ಜೂನ್ 1 ರಿಂದ ಮೇ 31ರವರೆಗೆ ಕೇಂದ್ರಗಳು ನಡೆಯುತ್ತವೆ (ವಾರದ ರಜೆ ಹೊರತುಪಡಿಸಿ)
- ರಂಜಾನ್ ಅವಧಿಯಲ್ಲಿ ಮದರಸ ಕೇಂದ್ರಗಳಿಗೆ ಬಿಡುವು.
- ಸಂಸ್ಕೃತ ಶಾಲೆಗಳಲ್ಲಿ ಔಪಚಾರಿಕ ಶಿಕ್ಷಣದಲ್ಲಿ ಇರುವಂತೆ ಬೇಸಿಗೆಯಲ್ಲಿ ರಜೆ.
- 10 ತಿಂಗಳ ನಿರಂತವಾಗಿ ನಡೆಯುವಂತೆ ವ್ಯವಸ್ಥೆಗೊಳಿಸುವುದು
- ದಿನದಲ್ಲಿ ಕನಿಷ್ಠ 4 ಗಂಟೆಗಳ ಅವಧಿಗೆ ಔಪಚಾರಿಕ ಶಿಕ್ಷಣವನ್ನು ಬೋಧಿಸಬೇಕು

- ವೇಳಾಪಟ್ಟಿಯನ್ನು ತಯಾರಿಸಿ ಬ್ಲಾಕ್ ಕಛೇರಿಗೆ ಕಳುಹಿಸತಕ್ಕದ್ದು.

**ಹಣಕಾಸು (50 ಮಕ್ಕಳು ಒಂದು ಕೇಂದ್ರಕ್ಕೆ)**

| | | |
|---|---|---|
| ■ ಮಧ್ಯಾಹ್ನದ ಉಪಹಾರಕ್ಕೆ 50 X 5 X 300ದಿನ | = | 75,000 |
| ■ ಸ್ವಯಂ ಸೇವಕರ ಗೌರವ ಧನ 2500 X 2 X 10 | = | 50,000 |
| ■ ಸಾದಿಲ್ವಾರು / ಟಿ.ಎಲ್.ಎಂ. | = | 5,000 |
| ■ ಮಕ್ಕಳಿಗೆ ಬರೆಯುವ ಸಾಮಗ್ರಿ 200 X 50 | = | 10,000 |
| | | **1,40,000** |

**ಟಿಪ್ಪಣಿ :** ಮಕ್ಕಳ ಸಂಖ್ಯೆ ಕಡಿಮೆ ಇರುವ ಸಂದರ್ಭದಲ್ಲಿ ಸ್ವಯಂ ಸೇವಕರ ಗೌರವಧನವನ್ನು 16.04.2007ರ ಸುತ್ತೋಲೆಯನ್ನು ಪರಿಗಣಿಸಿ ನೀಡುವುದು. (ನೋಡಿ ಅನುಬಂಧ)

**ಪಠ್ಯವಸ್ತು**

- ಇಲಾಖೆ ನಿಗದಿಪಡಿಸಿರುವ ಪಠ್ಯಪುಸ್ತಕಗಳನ್ನು ಬೋಧಿಸಬೇಕು ಹಾಗೂ ನಿಗದಿಪಡಿಸಿರುವಂತೆ ಪರೀಕ್ಷೆ ನಡೆಸಿ ಮುಂದಿನ ಹಂತಕ್ಕೆ ತೇರ್ಗಡೆ ನೀಡಬೇಕು.
- ಮೊದಲ ವರ್ಷದಲ್ಲಿ ಪ್ರಾರಂಭದ ಅವಧಿಯಲ್ಲಿ ಚಿಣ್ಣರ ಅಂಗಳ ಬೋಧಿಸುವುದು ಮಕ್ಕಳ ವಯೋಮಾನ ಮತ್ತು ಅವರ ಕಲಿಕೆಯ ವೇಗವನ್ನು ಅನುಸರಿಸಿ ತರಗತಿಯನ್ನು ನಿಗಧಿಗೊಳಿಸುವುದು
- ಔಪಚಾರಿಕ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪಡೆಯಲು ಪ್ರೋತ್ಸಾಹಿಸುವುದು.

**ಅಧ್ಯಾಪಕರು ಮತ್ತು ಸ್ವಯಂ ಸೇವಕರು :**

- ಇಲಾಖೆಯಿಂದ ಒಬ್ಬ ಅಧ್ಯಾಪಕರನ್ನು ತಪ್ಪದೇ ನಿಯೋಜಿಸುವುದು
- 25:1 ರಂತೆ ಒಟ್ಟು ಸ್ವಯಂ ಸೇವಕರನ್ನು ಧಾರ್ಮಿಕ ಸಂಸ್ಥೆಗಳು ನೇಮಕ ಮಾಡಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು. ತರಬೇತಿ ಪಡೆದ ಸ್ವಯಂ ಸೇವಕರಿಗೆ ಆದ್ಯತೆ ಇರಲಿ.
- ಸ್ವಯಂಸೇವಕರಿಗೆ ಅಭಿಶಿಕ್ಷಣ ನೀಡಲು ವ್ಯವಸ್ಥೆಗೊಳಿಸುವುದು

**ಒಡಂಬಡಿಕೆ ಮತ್ತು ಕೇಂದ್ರದ ಚಟುವಟಿಕೆಗಳ ಸಂಘಟನೆ :**

- ಅನುಬಂಧದಲ್ಲಿ ನೀಡಿರುವ ಸುತ್ತೋಲೆಯಂತೆ ಒಡಂಬಡಿಕೆಯನ್ನು ಮಾಡುವುದು.
- ಸ್ವಯಂ ಸೇವಕರ ನೇಮಕವಾಗುವುದನ್ನು ಗಮನಿಸುವುದು. ಕೂಡಲೇ ಇಲಾಖೆಯು ಅಧ್ಯಾಪಕರನ್ನು ನಿಯೋಜಿಸುವುದು.
- MOU ಅನುಸಾರ ಸೂಚಿತ ಮಾರ್ಗದರ್ಶಿ ಚೌಕಟ್ಟಿನಂತೆ ಹಣ ಬಿಡುಗಡೆ ಮಾಡುವುದು.
- ವೇಳಾಪಟ್ಟಿಯನ್ನು ಹಣ ಬಿಡುಗಡೆಯ ವೇಳೆ ಪಡೆಯುವುದು
- ಉಸ್ತುವಾರಿಯನ್ನು ಸಿ.ಆರ್.ಪಿ, ಇ.ಸಿ.ಒ, ಸಿ.ಎ.ಇ.ಒ, ಬಿ.ಆರ್.ಸಿ, ಬಿ.ಇ.ಒ. ಮತ್ತಿತರ ಅಧಿಕಾರಿಗಳು ನಡೆಸುವುದು ಹಾಗೂ ಸೂಕ್ತ ಹಿಮ್ಮಾಹಿತಿಯನ್ನು ನೀಡುವುದು.
- ಯುಕ್ತ ಕಲಿಕೆ ಸಾಮಗ್ರಿಗಳನ್ನು ಖರೀದಿಸಿ ಬಳಸುತ್ತಿರುವುದನ್ನು ಪರಿಶೀಲಿಸಬೇಕು
- ಕೇಂದ್ರಕ್ಕೆ ನೀಡುತ್ತಿರುವ ಅನುದಾನ ಸದ್ಬಳಕೆಯಾಗುವುದನ್ನು ಉಸ್ತುವಾರಿದಾರರು ಖಾತ್ರಿಪಡಿಸುವುದು.

* * * * *